0502/0902

**V Semester 3 Year LL.B./IX Semester 5 Year B.A. LL.B./B.B.A. LL.B.**
**Examination, December 2014**
**INTELLECTUAL PROPERTY RIGHTS – I (Opt. III)**

Duration : 3 Hours Max. Marks : 100

**Instructions** : 1. Answer Q. No. **9** and **any five** of the **remaining** questions.

2. Q. No. **9** carries **20** marks and the **remaining** questions carry **16** marks **each**.

3. Answers should be **written** either in **English** or **Kannada** completely.

**ಸೂಚನೆಗಳು** : 1. ಪ್ರಶ್ನೆಸಂಖ್ಯೆ **9** ಮತ್ತು ಉಳಿದ ಯಾವುದಾದರೂ **5** ಪ್ರಶ್ನೆಗಳನ್ನು ಉತ್ತರಿಸಿರಿ.

2. ಪ್ರಶ್ನೆ ಸಂಖ್ಯೆ **9**ಕ್ಕೆ **20** ಅಂಕಗಳು ಮತ್ತು ಉಳಿದ **ಪ್ರತಿ** ಪ್ರಶ್ನೆಗೆ **16** ಅಂಕಗಳು.

3. ಉತ್ತರವನ್ನು ಸಂಪೂರ್ಣವಾಗಿ **ಇಂಗ್ಲೀಷ್** ಅಥವಾ **ಕನ್ನಡ**ದಲ್ಲಿ ಉತ್ತರಿಸಿರಿ.

Q. No. 1. Discuss the factors which are accountable for the growth of Intellectual Property Rights.

ಬೌದ್ಧಿಕ ಸ್ವತ್ತಿನ ಹಕ್ಕುಗಳು ಬೆಳವಣಿಗೆ ಆಗಲು ಹೊಣೆಯಾಗಿರುವ ಅಂಶಗಳಾವುವು ? ಚರ್ಚಿಸಿರಿ.

Q. No. 2. Briefly explain the principles underlying the patent law in India.

ಭಾರತದಲ್ಲಿ ಸನ್ನದ್ದಿನ ಕಾನೂನಿನ ತಳಹದಿಯಾಗಿರುವ ಮೂಲತತ್ವಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿರಿ.

Q. No. 3. Examine the rights and the obligations of patentee.

ಸನ್ನದ್ದುದಾರನ ಹಕ್ಕುಗಳು ಮತ್ತು ಬಾಧ್ಯತೆಗಳನ್ನು ಪರೀಕ್ಷಿಸಿರಿ.

Q. No. 4. Explain the procedure for the registration of trade mark under Trade Mark Act, 1999.

ವ್ಯಾಪಾರಿ ಚಿಹ್ನೆ ಅಧಿನಿಯಮ, 1999ರ ಅಡಿಯಲ್ಲಿ ವ್ಯಾಪಾರಿ ಚಿಹ್ನೆ ನೋಂದಣಿ ಪ್ರಕ್ರಿಯೆಯನ್ನು ವಿವರಿಸಿರಿ.

Q. No. 5. Elucidate the salient features of Information Technology Act, 2000.

ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000ದ ಪ್ರಮುಖ ಗುಣಧರ್ಮಗಳನ್ನು ವಿಶದೀಕರಿಸಿರಿ.

**P.T.O.**

Q. No. 6. What is Geographical Indication ? Explain the procedure for and duration of registration of Geographical Indication under Geographical Indications (Registration and Protection) of Goods Act, 1999.

ಭೌಗೋಳಿಕ ಸೂಚನೆ ಎಂದರೇನು ? ಭೌಗೋಳಿಕ ಸೂಚನೆ (ನೋಂದಣಿ ಮತ್ತು ರಕ್ಷಣೆ) ಸರಕಿನ ಅಧಿನಿಯಮ, 1999 ಅಡಿಯಲ್ಲಿ ಭೌಗೋಳಿಕ ಸೂಚನೆ ನೋಂದಣಿ ಪ್ರಕ್ರಿಯೆ ಮತ್ತು ಅವಧಿ ಕುರಿತಂತೆ ವಿವರಿಸಿರಿ.

Q. No. 7. Explain the objectives of Patent Co-operative Treaty (PCT).

ಸನ್ನದ್ದು ಸಹಕಾರಿ ಒಡಂಬಡಿಕೆಯ ಉದ್ದೇಶಗಳನ್ನು ವಿವರಿಸಿರಿ.

Q. No. 8. Write short note **any two** of the following.

ಯಾವುದಾದರೂ **ಎರಡರ** ಕುರಿತಂತೆ ಕಿರು ಟಿಪ್ಪಣಿ ಬರೆಯಿರಿ.

a) Internet-service provider
ಅಂತರ್‌ಜಾಲ–ಸೇವೆ ನೀಡುವವ

b) Secret patent
ಗೌಪ್ಯ ಸನ್ನದ್ದು

c) Remedies against infringement of Geographical Indication.
ಭೌಗೋಳಿಕ ಸೂಚನೆಯ ಉಲ್ಲಂಘನೆ ವಿರುದ್ಧ ಇರುವ ಪರಿಹಾರಗಳು.

Q. No. 9. Solve **any two** of the following problems.

ಈ ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಗಳನ್ನು ಬಗೆಹರಿಸಿರಿ.

a) The plaintiff possesses product as well as process patent for manufacturing Indian sweets using fructose either singly or in combination. The defendant begins to manufacture sweets using fructose. The plaintiff challenges it as infringement of his patent. Against it, the defendant contends that the plaintiff's patent itself as invalid because it does not involve non-obvious element. Decide.

ವಾದಿಯು ಭಾರತೀಯ ಸಿಹಿಯನ್ನು ಹಣ್ಣಿನ ಸಕ್ಕರೆಯನ್ನು ಉಪಯೋಗಿಸಿ ಒಂಟಿಯಾಗಿ ಅಥವಾ ಒಟ್ಟುಗೂಡಿಸಿ ಉತ್ಪಾದಿಸಲು ಉತ್ಪತ್ತಿ ಹಾಗೂ ಪ್ರಕ್ರಿಯಾ ಸನ್ನದ್ದನ್ನು ಹೊಂದಿರುತ್ತಾನೆ. ಪ್ರತಿವಾದಿಯು ಹಣ್ಣಿನ ಸಕ್ಕರೆಯನ್ನು ಉಪಯೋಗಿಸಿ ಸಿಹಿಯನ್ನು ಉತ್ಪಾದಿಸಲು ಆರಂಭಿಸುತ್ತಾನೆ. ಇದನ್ನು ವಾದಿಯು ತನ್ನ ಸನ್ನದ್ದಿನ ಉಲ್ಲಂಘನೆ ಆಗಿದೆಯೆಂದು ಪ್ರಶ್ನಿಸುತ್ತಾನೆ. ಇದರ ವಿರುದ್ಧವಾಗಿ ಪ್ರತಿವಾದಿಯೂ ವಾದಿಯ ಸನ್ನದ್ದು ಸುಸ್ಪಷ್ಟವಲ್ಲದ ಅಂಶವನ್ನು ಹೊಂದಿರದೇ ಇರುವುದಕ್ಕಾಗಿ ಅನೂರ್ಜಿತವಾಗುತ್ತದೆಯೆಂದು ವಾದಿಸುತ್ತಾನೆ. ನಿರ್ಧರಿಸಿರಿ.

b) X sends false information through E-mail to his friend, Y to cause annoyance. Has X committed any offence under Information Technology Act ? Decide.

‘ಎಕ್ಸ್’ ಹೇಳುವವನು ತನ್ನ ಗೆಳೆಯನಾದ ‘ವಾಯ್’ನಿಗೆ ಕಿರುಕುಳ ನೀಡುವುದಕ್ಕಾಗಿ ಸುಳ್ಳು ಮಾಹಿತಿಯನ್ನು ಇ-ಮೇಲ್ ಮೂಲಕ ರವಾನಿಸುತ್ತಾನೆ. ಇಲ್ಲಿ ‘ಎಕ್ಸ್’ನು ಮಾಹಿತಿ ತಂತ್ರಜ್ಞಾನ ಅಧಿನಿಯಮದಡಿಯಲ್ಲಿ ಯಾವುದೇ ಅಪರಾಧ ಎಸಗಿರುವನೇ ? ನಿರ್ಧರಿಸಿರಿ.

c) The plaintiff who does already have a club in the name of ‘Lions Club’ challenges the club being established by the defendant in India as ‘Indian Lions’ on the ground that it leads to passing-off his club’s name. Against it, the defendant contends that passing-off is available against goods only but not to services. Decide.

ಪ್ರತಿವಾದಿಯು ಭಾರತದಲ್ಲಿ ತನ್ನ ಸಂಘವನ್ನು ‘ಇಂಡಿಯನ್ ಲಯನ್ಸ್’ಯೆಂದು ಸ್ಥಾಪಿಸುತ್ತಿರುವುದು ವಾದಿಯ ಸಂಘವು ‘ಲಯನ್ಸ್‌ಕ್ಲಬ್’ಯೆಂಬ ಹೆಸರಿನಲ್ಲಿ ಹೊಂದುವುದರಿಂದ ವಾದಿ ಸಂಘದ ಹೆಸರಿನ ತಪ್ಪು-ಗ್ರಹಿಕೆ ಆಗುವುದಾಗಿ ವಾದಿಯು ಅದನ್ನು ಪ್ರಶ್ನಿಸುತ್ತಾನೆ. ಇದಕ್ಕೆ ವಿರುದ್ಧವಾಗಿ, ಪ್ರತಿವಾದಿಯು ತಪ್ಪು-ಗ್ರಹಿಕೆಯು ಕೇವಲ ಸರಕುಗಳ ವಿರುದ್ಧ ಲಭ್ಯವಾಗುತ್ತದೆ. ವಿನಃ ಸೇವೆಗಳ ವಿರುದ್ಧವಲ್ಲವೆಂದು ಪ್ರತಿವಾದಿಸುತ್ತಾನೆ. ನಿರ್ಧರಿಸಿರಿ.